**ಕೊಳೆಯಾದ ಮತ್ತು ಹರಿದ ನೋಟುಗಳನ್ನು ವಿನಿಮಯ ಮಾಡಿಕೊಳ್ಳಲು ಸೌಲಭ್ಯಗಳು**
**ನವೆಂಬರ್, 28, 2002**

ಭಾರತೀಯ ರಿಸರ್ವ್ ಬ್ಯಾಂಕು (ಆರ್‌ಬಿಐ) ಸಾರ್ವಜನಿಕ ವಲಯದ ಎಲ್ಲ ಬ್ಯಾಂಕುಗಳ ಶಾಖೆಗಳಿಗೆ ಮತ್ತು ಖಾಸಗಿ ಬ್ಯಾಂಕುಗಳ ಎಲ್ಲ ಕರೆನ್ಸಿ ಚೆಸ್ಟ್ ಶಾಖೆಗಳಿಗೆ ಎಲ್ಲ ಮೌಲ್ಯದ ಎಲ್ಲ ಬಗೆಯ ಕೊಳೆಯಾದ/ಹರಿದ ನೋಟುಗಳನ್ನು ಸ್ವೀಕರಿಸಲು ಮತ್ತು ವಿನಿಮಯ ಮಾಡಲು ಅಧಿಕಾರ ನೀಡಿದೆ. ಅಂಥ ನೋಟುಗಳ ವಿನಿಮಯವನ್ನು ಆರ್‌ಬಿಐ (ನೋಟು ಮರುಸಂದಾಯ) ನಿಯಮಗಳು, 1975ರ ಪ್ರಕಾರ ಮೌಲ್ಯ ಸಂದಾಯ ಮಾಡಲಾಗುತ್ತದೆ.

ಸಾರ್ವಜನಿಕರಿಗೆ ಇನ್ನೂ ಉತ್ತಮ ಸೇವೆಯನ್ನು ಸಲ್ಲಿಸುವ ದೃಷ್ಟಿಯಿಂದ, ಹರಿದ ನೋಟುಗಳಿಗೆ ವಿನಿಮಯವನ್ನು ಟಿಎಲ್‌ಆರ್ (ಟ್ರಿಪಲ್ ಲಾಕ್ ರಿಸೆಪ್ಟಕಲ್) ಲಕೋಟೆಗಳ ಮೂಲಕ ಸಹ ಆರ್‌ಬಿಐ ನೀಡುತ್ತದೆ. ಸಾರ್ವಜನಿಕರು ಆರ್‌ಬಿಐನ ಎಲ್ಲ ಪ್ರಾದೇಶಿಕ ಕಚೇರಿಗಳಲ್ಲಿ ವಿಚಾರಣಾ ಕೌಂಟರುಗಳಿಂದ ಅಂಥ ಟಿಎಲ್‌ಆರ್ ಲಕೋಟೆಗಳನ್ನು ಪಡೆಯಬಹುದು ಮತ್ತು ಅವರ ನೋಟುಗಳನ್ನು ಆ ಲಕೋಟೆಯೊಳಗಿಟ್ಟು ಆಯಾ ಆರ್‌ಬಿಐ ಕಚೇರಿಗಳಲ್ಲಿ ಕಾಗದ ಟೋಕನ್ ಪಡೆದು, ಲಕೋಟೆಯ ಮೇಲೆ ವಿವರಗಳನ್ನು ಬರೆದು ಸಲ್ಲಿಸಬಹುದು. ಈ ಪೆಟ್ಟಿಗೆಯನ್ನು ಆರ್‌ಬಿಐನ, ಪ್ರತಿ ನೀಡಿಕೆ ಕಚೇರಿಗಳಲ್ಲಿ ಇರುವ ವಿಚಾರಣಾ ಕೌಂಟರುಗಳಲ್ಲಿ ಇಡಲಾಗಿರುತ್ತದೆ. ಹರಿದ ನೋಟುಗಳ ಸ್ವೀಕಾರಾರ್ಹ ವಿನಿಮಯ ಮೌಲ್ಯವನ್ನು ಬ್ಯಾಂಕ್ ಡ್ರಾಫ್ಟ್ ಅಥವಾ ಪೇ ಆರ್ಡರ್ ಮೂಲಕ ಜಮಾ ಮಾಡಲಾಗುವುದು. ಹರಿದ ನೋಟುಗಳನ್ನು ಆರ್‌ಬಿಐನ ಯಾವುದೇ ಕಚೇರಿಗೆ ನೋಂದಾಯಿತ/ವಿಮೆ ಮಾಡಿದ ಅಂಚೆಯ ಮೂಲಕ ಸಹ ಕಳುಹಿಸಬಹುದು.

ಅತಿಯಾಗಿ ಕೊಳೆಯಾದ, ಮುಟ್ಟಿದರೆ ಹರಿಯುವಂತಿರುವ ಅಥವಾ ಸುಟ್ಟುಹೋಗಿರುವ ಮತ್ತು ಆ ಕಾರಣಕ್ಕೆ ಅದನ್ನು (ವಾಡಿಕೆಯ ರೀತಿಯಲ್ಲಿ) ಬಳಸುವುದು ಸಾಧ್ಯವಿಲ್ಲದಿರುವ ನೋಟುಗಳನ್ನು ಆರ್‌ಬಿಐನ ನೀಡಿಕೆ ಕಚೇರಿಯಲ್ಲಿ ಮಾತ್ರವೇ ಸಲ್ಲಿಸಬೇಕು. ಅಂಥ ನೋಟುಗಳನ್ನು ಹೊಂದಿರುವ ವ್ಯಕ್ತಿಗಳು, ಈ ಉದ್ದೇಶಕ್ಕಾಗಿ ಬೇಡಿಕೆಗಳ ಶಾಖೆ, ನೀಡಿಕೆ ಇಲಾಖೆ, ರಿಸರ್ವ್ ಬ್ಯಾಂಕು–ಇದರ ಪ್ರಭಾರೀ ಅಧಿಕಾರಿಯನ್ನು ಸಂಪರ್ಕಿಸಬಹುದು.

ಅಜಿತ್ ಪ್ರಸಾದ್
ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ ಸಂ.: 2002–03/561